# ಶಬರಿಗಾದನು ಅತಿಥಿ ದಾಶರಥಿ

ಆ ಬೆಳದಿಂಗಳಿರುಳಿನಲಿ, ಮುಪ್ಪು ಯೌವನದ ಕನಸು ಕಾಣುವಂತೆ ಕನಸೊಂದನ್ನು ಕಂಡಳು ಮುದುಕಿ, ಶಬರಿ. ನಡುರಾತ್ರಿಯಲ್ಲಿ ಮುಗುಳ್ನಗುತ್ತ, ತಾನು ಮಲಗಿದ್ದ ಹುಲ್ಲಿನ ಹಾಸಿಗೆಯ ಮೇಲೆ ಎದ್ದುಕುಳಿತು, ತಾನು ಕಂಡ ಗಗನ ನೀಲಾಭನನ ಸ್ವಪ್ನದರ್ಶನದ ಶ್ರೀ ಮೂರ್ತಿಯನ್ನು ಮತ್ತೆ ನೆನಪಿಸಿಕೊಂಡಳು, ಅವಳೆದೆ ತುಂಬಿಬಂತು. ಹರ್ಷವುಕ್ಕುವ ಮುಖದಲ್ಲಿ ಸುಕ್ಕು ತೆರೆತೆರೆ, ಪುಂಡಿನಾರಿನ ಗಂಟಿನಂತೆ ಬಿಳೀ ನೆರೆತಲೆಗೂದಲ, ಹಲ್ಲಿಲ್ಲದ ಬೊಜ್ಜು ಬಾಯಿಯ, ಗೂನು ಬೆನ್ನಿನ, ಹಣ್ಣು ಮುದುಕಿ ನಡುಗಿ ನಡೆದು, ಗುಡಿಸಲು ಬಾಗಿಲ ತೆರೆದು ನೋಡಿದಳು. ಆ ಚಂದ್ರಸುಂದರ ಈ ಮುದುಕಿಯ ಕಂಡು ಕನಿಕರಗೊಂಡು ಕರಗಿದನೋ ಎಂಬಂತೆ ತಿಂಗಳ ಬೆಳಕು ಚೆಲ್ಲಿ ಶಬರಿಯ ಕುಟೀರ, ಸುತ್ತಲೆತ್ತೆತ್ತಲೂ ಪಸರಿಸಿ ಹಬ್ಬಿದ ಹಸಿರೆಲ್ಲವೂ ಅವಳ ತಲೆಗೂದಲಷ್ಟೇ ಬೆಳ್ಳಗಾಗಿ ರಾಜಿಸಿತು.

ಮೌನವಾಗಿ ನಿಂತು, ಆರದ ದೃಷ್ಟಿಯ ನೆಟ್ಟು, ಮನತುಂಬುವವರೆಗೆ ಸುತ್ತಲೂ ನೋಡಿ. ನಿಟ್ಟುಸಿರು ಬಿಟ್ಟು, ಶಬರಿ ತನ್ನೊಳಗೇ ಮರುಗಿದಳು, 'ನೀನೆಂದಿಗೆ ಬರುವೆಯಯ್ಯ, ಓ ನನ್ನಯ್ಯ, ಕಂದಯ್ಯ, ರಾಮಚಂದ್ರಯ್ಯ? ಗುರುದೇವ ಮುನಿ ಮಾತಂಗನ ಮಾತು ಸುಳ್ಳಾಯಿತೇ? ನಿನಗಾಗಿ ಹತ್ತು ವರ್ಷದಿಂದ ಕಾದಿರುವೆ ಮಗನೇ. ಹಣ್ಣುಹಂಪಲಗಳನೆಲ್ಲ ಬಿತ್ತಿಬೆಳೆದು ಅಣಿಮಾಡಿ ಕಾಯುತ್ತಿದೆ ನನ್ನ ಆಶ್ರಮ. ಬೆದರುತ್ತಿದೆ ಮನ, ಓ ನನ್ನ ಇಷ್ಟಮೂರ್ತಿಯೇ, ನೀನು ಬರುವ ಮುನ್ನವೇ ಈ ಕಾಯವಳಿದುಬಿಟ್ಟರೇ? ಹಣ್ಣು-ಹಣ್ಣಾದ ಈ ಮುಪ್ಪಿನ ದೇಹ ಇನ್ನೆಷ್ಟು ತಾಳುವುದೋ? ಬಾಳುವುದೋ? ಈ ದೇಹ ತಡೆದುಕೊಂಡರೂ ಕಣ್ಣುಗಳಾಗಲೇ ಮಬ್ಬಾಗಿ-ಮಂಜಾಗಿ ದೃಷ್ಟಿ ಹಿಂಜರಿಯುತ್ತಿದೆ. ಕಣ್ಣು ಕಾಣದಾದ ಮೇಲೆ ನೀನು ಬಂದರೆ, ಅಯ್ಯಯ್ಯೋ, ಆರಿದ ಕಂಗಳಿಂದ ನಿನ್ನನ್ನು ಹೇಗೆ ನೋಡಲಿ? ಕೈಯಿಂದ ಮೈದಡವಿ ಸಂತೋಷ ಪಡಬಲ್ಲೆನಾದರೂ ಈ ಕಂಗಳ ದಾಹವನೆಂತು ತಣಿಸಲಿ, ಹೇಳು? ಬಾರೋ, ಓ ಕಂದಯ್ಯ ಕಣ್ಣುಗಳು ಹೋಗುವ ಮೊದಲೇ. ಬಾರಯ್ಯ, ಈ ಬಾಳು ಕೊನೆಯಾಗುವ ಮೊದಲೇ. ತಾರಯ್ಯ ನಿನ್ನ ಶಾಂತಿಯ.' ರಾತ್ರಿಯ ನಿಶಬ್ದತೆಗೆ ಭಂಗ ಬಾರದಂತೆ ತನ್ನೊಳಗೇ ಮರುಗುತ್ತ ಗುಡಿಸಲೊಳಹೊಕ್ಕಳು ಶಬರಜ್ಜಿ, ಬೇಡಿತಿ, ಮತಂಗ ಮುನಿವರ ಶಿಷ್ಯೆ.

ಇರುಳು ಅಳಿದು ಉಷೆ ಮೂಡಿ ಒಯ್ಯನೊಯ್ಯನೇ ಬೆಳಗಾಯಿತು. ಮುದುಕಿಗೇಕೆ ಕಳವಳ? ಏಕೆ ತಲ್ಲಣ, ಏಕೆ ಉಲ್ಲಾಸ? ಗುಡಿಸಲೊಳಹೋಗುವಳು, ತಟ್ಟನೆ ಹೊರಚಿಮ್ಮಿ ಹಾಗೇ ಸ್ವಲ್ಪ ಹೊತ್ತು ನಿಂತು ನೋಡುವಳು-ಭುವಿಯ ಬೈತಲೆಯಂತೆ ಬಯಲಿನ ನಡುವೆ ಸವೆದ ಕಾಲ್ದಾರಿಯನ್ನು, ಅದರಾಚೆಗಿನ ತಿರುವನ್ನು. ಗೊಣಗುವಳು, ಗುಣಗುಣಿಸುವಳು, ಮತ್ತೆ ಒಳಹೊಕ್ಕು ತೆಂಗಿನ ಗರಿಯ ಪೊರಕೆಯ ತಂದು, ಮನೆ ಮುಂದೆ ಗೋಮಯ ಬಳಿದು, ಜಗುಲಿಯ ತರಗು ಸದೆ ಗುಡಿಸಿ ಸೊಂಟಕ್ಕೆ ಕೈಕೊಟ್ಟು ನಿಲ್ಲುವಳು ಮತ್ತೆ ಆ ಕಾಲ್ದಾರಿಯ ಸೀಮಾಂತರೇಖೆಯನ್ನೇ ನೋಡುತ್ತ. ಈ ರೀತಿ ಶಬರಿ ನಿರೀಕ್ಷಣೆಯ ವ್ರತಗೈಯುತ್ತಿರಲು ಹೊತ್ತೇರಿ ಹಗಲಾಯ್ತು. ಬಾನಿನ ಕಾವಲಿಯ ಮಧ್ಯೆ ಕಿರಣರವಿಯು ತಾನು ಬೆಳ್ಳಿ ಹನಿಯಾಗಿ ಬಿಸಿಲ ಕೆಂಪು ಬೇಗೆಯ ಮಳೆಗರೆಯುತ್ತಿರಲು ಹುಲ್ಲುಗಾವಲಿನ ನಡುವೆ ಮುದುಕಿಯ ಕಣ್ಣಿಗೆ ಯಾರೋ ಬರುತ್ತಿರುವಂತೆ ಭ್ರಾಂತಿ! ನಿಂತಳು ಶಬರಿ ಡೊಂಕಾಗಿ! ಸೊಂಟಕ್ಕೊಂದು ಕೈಕೊಟ್ಟು, ಹಣೆಗೊಂದು ಕೈಯೆತ್ತಿ, ಹುಬ್ಬಿನ ಮೇಲೆ ಸುಕ್ಕಿನ ತೆರೆಮೂಡುತ್ತಿರಲು ನೋಡಿದಳು, ನೋಡಿದಳು, ಕಣ್ಣುಗಳ ಕೀಲಿಸಿ. ಕಂಡಳೇ ಶಬರಿ ರಾಮ ಲಕ್ಷ್ಮಣರ ದುಸ್ಥಿತಿಯ ವೇಷದಲಿ?

ಭಗವಂತನ ಆಗಮನವೇನು ಭಕ್ತನ ನಿರೀಕ್ಷೆಯಂತಿರುವುದೇ? ಸುಖದಲ್ಲಿ ಬೇಡಲು, ದುಃಖದಲಿ ಮೈದೋರಿ, ಭಕ್ತನ ಸರ್ವವನ್ನೂ ಸುಲಿದು ನೈವೇದ್ಯವಾಗಿ ಸ್ವೀಕರಿಸುತ್ತಾನಲ್ಲವೇ? ತನ್ಮೂಲಕ ನಮ್ಮೆಲ್ಲ ಅಹಂಕಾರವನ್ನು ದಿವ್ಯಶೂನ್ಯತೆಗೆ ತಳ್ಳಿ ನಮ್ಮನ್ನು ಸಂಪೂರ್ಣತಾ ಸಿದ್ಧಿಯೆಡೆಗೆ ಕರೆದೊಯ್ಯುತ್ತಾನಲ್ಲವೇ?

ಹೊದೆಹೊದೆಯಾಗಿ ಕೆದರಿದ್ದ ತಲೆಗೂದಲು, ಕೊಳೆ ಬೆವರು ಮೆತ್ತಿದ ನಾರುಮಡಿ, ತೇಜಸ್ಸು ಕುಂದಿದ ಮುಖ, ಖಿನ್ನತೆಯಲ್ಲಿ ಜೋಲುಬಿದ್ದಿದ್ದ ಕಪೋಲಗಳು ವಿಯೋಗಾಗ್ನಿಯ ಇಂಧನದಿಂದ ಬೆಂದ ಶರೀರದ, ರೂಕ್ಷರೂಪದ ರಾಮನನ್ನು ನೋಡಿ ಮಂದಗಣ್ಣಿನ ಶಬರಿ ಯಾವನೋ ಬೇಡನಿರಬೇಕು ಎಂದುಕೊಂಡಳೆಂದರೆ ಮೈಥಿಲೀ ಪ್ರಿಯನ ದಾರುಣ ಸ್ಥಿತಿಗೆ ಇನ್ನೇನು ಸಾಕ್ಷಿ ಬೇಕು? ಕೋಗಿಲೆಯ ಮರಿಯೆಂದು ನೋಡಿದರೆ ಕಾಗೆಮರಿ ಕೂಗಿದಂತಾಯ್ತು ಎಂದುಕೊಂಡು ಉಲ್ಲಾಸವೆಲ್ಲ ಕುಗ್ಗಿ, ಮುದುಕಿ ಬಂದ ಆ ಇಬ್ಬರು ಭೀಮಾಕಾರರ ನೋಡುತ್ತಿರಲು ಲಕ್ಷ್ಮಣ ನುಡಿದನು, 'ದಣಿದು ಬಂದಿಹೆವಜ್ಜಿ; ಬಿಸಿಲುರುಳುತಿದೆ; ಗುಡಿಸಲೊಳಗೆ ಸ್ವಲ್ಪ ಜಾಗಕೊಟ್ಟು, ತಿನ್ನಲಿತ್ತು ಕರುಣಿಸು ನಿನ್ನ ಈ ಪರದೇಶಿ ಮಕ್ಕಳನ್ನು, ಚಿರಋಣಿಗಳಾಗಿರುವೆವು.' 'ಕಂಡವರಿಗೆಲ್ಲ-ಬರುವ ಬೇಡರಿಗೆಲ್ಲ ಉಣ್ಣಲಿತ್ತು, ಜಾಗಕೊಟ್ಟು, ಮೆದು-ಆಸನವನ್ನೀಯಲು ನಾನೇನು ಅಡುಗೂಲಜ್ಜಿಯಲ್ಲ ಕಣಯ್ಯ!' ನಿಷ್ಠುರದಿಂದ ನುಡಿದು ಮತ್ತೆ 'ಬಡವಿ ನಾನು, ಇದ್ದುದ್ದನ್ನೇ ಕೊಡುತ್ತೇನೆ, ಬನ್ನಿ.'

ಅಂದು ಒಳ ನಡೆದಳು ಅಜ್ಜಿ. ಮುದುಕಿಯ ಮನ ಕರಗಿದುದಕ್ಕೆ ಲಕ್ಷ್ಮಣ ಅಣ್ಣನನ್ನು ನೋಡಿ ನಸುನಕ್ಕನು. ಇಬ್ಬರೂ ಪರ್ಣಶಾಲೆಯನ್ನು ಹೊಕ್ಕರು.

ಉರಿಬಿಸಿಲ ಝಳದಿಂದ ಗುಡಿಸಲೊಳಕ್ಕೆ ಬಂದು, ಕಣ್ಣು ತಿಳಿಯಾಗಲು, ಮತ್ತೊಮ್ಮೆ ಬಂದ ಅತಿಥಿಗಳನ್ನು ಇನ್ನೂ ಬಗೆಹರಿಯದ ಸಂದೇಹದಿಂದ ನೋಡಿದಳು ಬೇಡಿತಿ, ಕೇಳಿದಳು, 'ಎಲ್ಲಿಂದ ಬಂದಿರೋ? ನೀವ್ಯಾರೋ ಮಕ್ಕಳಿರಾ? ನನ್ನ ಕಣ್ಣೂ ಮಬ್ಬು, ಬುದ್ಧಿಯೂ ಮಂಜು, ಏನೂ ತಿಳಿಯುತ್ತಿಲ್ಲ.' ಊರ್ಮಿಳೇಶನು ಅದಕ್ಕೆ 'ಅಜ್ಜಿ, ಮನೆಯಿಲ್ಲ, ಮಾರಿಲ್ಲ; ಮನೆಗೆಟ್ಟು ನೆಲೆಗೆಟ್ಟು ಕಾಡೇ ಮನೆಯಾಗಿರುವವರು ನಾವು.' ಎಂದುತ್ತರಿಸಿ, 'ಇಲ್ಲೆಲ್ಲಾದರೂ ಮೀಯಲು ಕೊಳವಿದೆಯೇ ತಾಯಿ?' ಎಂದು ಕೇಳಿದನು. ಅಚ್ಚರಿ ಪಡುತ್ತ ಶಬರಿ (ಬೇಡರಿಗೇಕೋ ಸ್ನಾನ?), 'ಆ ಪೇರಲೆಯ ಮರದಡಿ ಕೊಳವಿದೆ. ನಿಮ್ಮಂತೆ ಮನೆಗೆಟ್ಟು, ನೆಲೆಗೆಟ್ಟು ತೊಳಲುವವರು ಎಷ್ಟು ಜನರಿದ್ದಾರೋ ಈ ನಾಡಿನಲ್ಲಿ? ಏನು ಕೇಡುಗಾಲವೋ? ಒಬ್ಬನ ಹೆಂಡತಿಯನ್ನು ಇನ್ನೊಬ್ಬ ಬಯಸುವುದು!' ಅಂದಳು. ತಟ್ಟನೇ ಬೆಚ್ಚಿ ಕೇಳಿದನು ದಾಶರಥಿ, 'ಏನು? ಯಾರ ಹೆಂಡತಿಯನ್ನು ಯಾರು ಬಯಸಿದರು?' 'ಹೋಗು ಮಗು ಮಿಂದು ಬಾ. ಊಟವಾದ ಮೇಲೆ ಆ ಹೊಲಸು ಕತೆಯನ್ನು ಹೇಳುತ್ತೇನೆ.'

ಅವರಿಬ್ಬರೂ ಮೀಯಲು ಕೊಳಕ್ಕೆ ಹೋಗಲು ಇತ್ತ ಮುದುಕಿ ಅವರ ಜೋಳಿಗೆ, ನಾರುಮಡಿಗಳು, ಬಿಲ್ಲು-ಬಾಣ, ಬತ್ತಳಿಕೆಗಳನೆಲ್ಲ ಮುಟ್ಟಿನೋಡಿದಳು. ಯಾವುದೋ ವಸ್ತುವೊಂದರಿಂದ ಬೆಚ್ಚಿ-ಅಚ್ಚರಿಪಟ್ಟಳಾದರೂ ತನ್ನ ಮನಸ್ಸು ರಚಿಸಿದ್ದ ರಾಮನನ್ನು ಈಗ ಬಂದಿದ್ದ ರೂಕ್ಷಾವತಾರರಲ್ಲಿ ಕಾಣದೇ ಸುಮ್ಮನಾದಳು.

ಅಷ್ಟರಲ್ಲಿ ರಾಮನೂ ಸೌಮಿತ್ರಿಯೂ ಮಿಂದುಬಂದರು. ಕಪ್ಪುಹಿಡಿದ ಚಿನ್ನವು ಬೆಂಕಿಯಿಂದ ಹೊಳೆದಂತೆ ಕಾಣುತ್ತಿದ್ದ ಅವರನ್ನು ಕಂಡು ಅಜ್ಜಿಯ ಕುತೂಹಲ ಸೂಜಿಮೊನೆಯನೇರಿತ್ತು. ಬೇಡರಿಗೆಲ್ಲಿಂದ ಬಂದೀತು, ಈ ತೇಜಸ್ಸು, ಈ ಆಳ್ತನ, ಮೆದು ಮಾತು, ನಯದ ನಡೆ? ಯಾರೋ ರಾಜಪುತ್ರರಿರಬೇಕೆಂದುಕೊಂಡಳು ಆ ಮಾತಂಗಮುನಿ ಶಿಷ್ಯೆ (ಸೀತೆಯಿಲ್ಲದೇ ಬಂದವನು ಈತ ರಾಮನಲ್ಲವೆಂದುಕೊಂಡು).

ನಳನಳಿಸುವ ಸುಳಿದಳಿರ ಕುಡಿಬಾಳೆಯೆಲೆಯನ್ನು ಹಾಸಿ; ಹುಲ್ಲಿನ ಚಾಪೆ-ಮಣೆಗಳನ್ನು ಕುಳಿತುಕೊಳ್ಳಲು ಇಟ್ಟು, ಹಸಿರು ದೊನ್ನೆಗಳಲ್ಲಿ ತಿಳಿನೀರು, ಸಸಿಯಡಿಕೆಯ ಹೊಂಬಾಳೆಯ ಚಿಪ್ಪುಗಳಲ್ಲಿ ಕೆನೆಹಾಲು, ಜೇನುತುಪ್ಪವನ್ನು ತಂದಿಟ್ಟು, ಸಿಹಿಗೆಣಸು, ಬಾಳೇ ಹಣ್ಣು, ಕಂದಮೂಲಗಳು, ಹಣ್ಣುಹಂಪಲುಗಳು, ಸೌತೆ-ಪಚ್ಚಡಿಗಳು, ಸಣ್ಣ ಅಕ್ಕಿಯಬೆಚ್ಚನೆಯ ಅನ್ನ, ಮೊಸರು, ಬೆಲ್ಲವನ್ನೂ ಬೆಣ್ಣೆಯನ್ನೂ ಬಡಿಸಿ, ಸವಿನುಡಿಯ ಮಾತನಾಡುತ್ತ ಮುಗುಳ್ನಗುತ್ತ ನುಡಿದಳು, 'ಯಾರ ಸಂಪದ ಯಾರಿಗೋ? ನಿಮಗೇ ಇದೆಲ್ಲ ಸಲ್ಲಬೇಕಾಗಿದ್ದರೆ ಬಡಿಸಲು ನನಗೇನು? ಉಂಡು ತಣಿಯಿರೋ ಮಕ್ಕಳೇ. ಬಂದ ಅತಿಥಿ ಯಾರಾದರೇನಂತೆ?' 'ಯಾರ ಸಂಪದ ಯಾರಿಗೆ ಹೇಳಜ್ಜಿ? ನಾವು ಉಣುತ್ತಿರುವ ಈ ಸವಿಭೋಜನ ಯಾರಿಗೆ ಮೀಸಲಾಗಿತ್ತು? ಯಾರು ನಿನ್ನ ಪ್ರೀತಿಯ ಆ ಪುಣ್ಯವಂತ ಅತಿಥಿ?'

'ದಶರಥ ಕುಮಾರನು,' ರಾಮಲಕ್ಷ್ಮಣರು ಒಬ್ಬರನೊಬ್ಬರು ನೋಡಿಕೊಂಡು ಮುದುಕಿಯನ್ನು ನೋಡಲು, 'ಲಕ್ಷ್ಮಣಾಗ್ರಜ ಅವನು ಜಾನಕಿಗೆ ಇನಿಯನು,' ಅತ್ತಳು ಶಬರಿ, ಹೆಸರು ಹೇಳುತ್ತ ಹರುಷ ಉಕ್ಕಿಬರಲು. 'ಇಂದು ನೀವುಣ್ಣುತ್ತಿರುವ ಭೋಜನವನ್ನು ದಿನವೂ ಅಣಿಮಾಡಿ ಹತ್ತು ವರ್ಷದಿಂದ ಕಾಯುತ್ತಿರುವೆ ಕಂದರಿರಾ, ರಾಮಲಕ್ಷ್ಮಣಸೀತೆಯರಿಗಾಗಿ. ಗುರುವಾಣಿಯು ಸುಳ್ಳಾಗುವುದೇ?' ಎಂದು ಕೇಳಿ ಮುನಿ ಮತಂಗ ಹೇಳಿದ ರಾಮಾಗಮನ ಪುಣ್ಯವನ್ನೂ, ವಾರ್ತಾ ಭವಿಷ್ಯವನ್ನೂ ಹೇಳಿದಳು ಮಾತಂಗಿ. ಮತ್ತೆ ಕೇಳಿದಳು, 'ನೀವ್ಯಾರೋ ಉತ್ತರದಿಂದ ಬಂದವರಂತೆ ಕಾಣುತ್ತಿರುವಿರಿ ಮಕ್ಕಳೇ, ಕಂಡಿದ್ದೀರಾ? ಕೇಳಿದ್ದೀರಾ? ರಾಮನೆಲ್ಲಿದ್ದಾನೆ, ಎಲ್ಲಿಗೆ ಹೋಗಿದ್ದಾನೆ ಗೊತ್ತೇ? ಈ ಜೀವನ ಪಯಣವನ್ನು ಮುಗಿಸಿ ಹೋಗುವ ಮುನ್ನ ಒಮ್ಮೆಯಾದರೂ ರಾಮನನ್ನು ಕಾಣುತ್ತೇನೆಯೇ? ಅವನ ಸಿರಿಮೊಗದ ದರ್ಶನವಾಗುವುದೇ? ನನಗೆ ಆ ಶಾಂತಿನಿಧಿಯನ್ನು ಕಾಣುವುದೇ ಪರಮಶಾತಿ!' ಕಣ್ದುಂಬಿಕೊಂಡು ಆಲಿಸಿದನು ರಾಮ ಅಜ್ಜಿಯ ಮಾತುಗಳನ್ನು, ನುಡಿದನು ಗದ್ಗದಿತನಾಗಿ, 'ಆ ಶಾಂತಿನಿಧಿಗೆ ಶಾಂತಿಯಿಲ್ಲದೇ ತೊಳಲುತಿದ್ದಾನೆ. ಮನೆಯಿಲ್ಲದೇ ಹೇರಡವಿಯೇ ಮನೆಯಾದವನನ್ನು ಶಾಂತಿನಿಧಿಯೆಂದು ಸುಮ್ಮನೇ ಬಣ್ಣಿಸುವೆಯೇಕೆ ತಾಯಿ? ಸಾಮಾನ್ಯನನ್ನೇ ದೇವನನ್ನಾಗಿ ಮಾಡುತ್ತಿದೆ ನಿನ್ನ ಊಹೆ!' 'ತೆಗೆ, ತೆಗೆ ಮಹಾತ್ಮನನ್ನು ಸುಮ್ಮನೇ ತೆಗಳದಿರು,' 'ನನಗೆ ರಾಮ ಗೊತ್ತು' 'ಇಲ್ಲ, ರಾಮ ನಿನಗೆ ಗೊತ್ತಿಲ್ಲ.' 'ನನಗೆ ಗೊತ್ತಿಲ್ಲವೇ? ನನ್ನನ್ನು ನಾನೇ ಅರಿಯೆನೆನ್ನುವೆಯಾ ತಾಯಿ?' ಬೆರಗಾಗಿ ರಾಮನ ಕಣ್ಣಲ್ಲಿ ಕಣ್ಣಿಟ್ಟು ನೋಡಿದಳು ಶಬರಜ್ಜಿ. ರಾಮನು ತಟ್ಟನೆ ತಲೆತಗ್ಗಿಸಿ, ಕಣ್ಣೆತ್ತಿ ನೋಡದಂತೆ ಊಟಮಾಡಹತ್ತಿದನು, ಅವನ ಕಣ್ಣೀರ ಬಿಂದುಗಳು ಕೈತುತ್ತಿನೊಳಕ್ಕೆ ಉದುರಿದವೇ? ನಿಜವೋ, ಕಲ್ಪನೆಯೋ? ಸುಮ್ಮನಾದಳು ಮುದುಕಿ; ತನಗೆ ಅರಿಯದ ಅರ್ಥವನ್ನು ಹೇಗೆ ಇತ್ಯರ್ಥಮಾಡಿಕೊಳ್ಳುವುದು ಎಂದುಕೊಂಡು.

ಊಟವಾದ ನಂತರ ದಣಿವಾರಿಸಿಕೊಳ್ಳಲೆಂದು ವಿಶ್ರಾಂತಿಗೋಸ್ಕರ ಇಳಿಬಿಸಿಲ ಮಧ್ಯಾಹ್ನದಲ್ಲಿ ಮಲಗಿದರು ರಾಮಲಕ್ಷ್ಮಣರಿಬ್ಬರೂ. ಆ ನಂತರ ಬಿಳಿಮೈಯವನು ಎಚ್ಚೆತ್ತು ಹೊರಹೋಗಿದ್ದಾಗ, ನೀಲಿ ಮೈಯವನು ಮಲಗಿದ್ದ ನಿದ್ದೆಯಲ್ಲೇ

ಕನವರಿಸಿದನು, 'ಸೀತೆ, ಬಾ ಇಲ್ಲಿ; ಬಾ, ಪ್ರಿಯೆ, ಜನಕಜಾತೆ!' ಅಲ್ಲೇ ಬಳಿಯಲ್ಲಿ ಗುಡಿಸಲೊಳಗೆ ಬೆಲ್ಲ–ಬೇಲದ ಹಣ್ಣುಗಳ ಬೆರಸಿ ಪಾನಕ ಮಾಡುತ್ತಿದ್ದ ಅಜ್ಜಿ ಓಡಿ ಬಂದಳು. ಹಾಸಿಗೆಯ ಬಳಿ ನಿಂತು ದೇವಗಾತ್ರನ, ಕನಸಿನಲ್ಲಿಯೇ ಮುಗುಳ್ನಗುತ್ತಿದ್ದವನ ನೋಡಿ ಹರ್ಷವನ್ನನುಭವಿಸಿದಳು ಮತ್ತು ತನ್ನ ಮನದೊಳಗಿದ್ದ ಸೌಮ್ಯ ಮೂರ್ತಿಯನ್ನು ಆ ಮಂದಹಸಿತ ಮುಖಕಮಲದಲ್ಲಿ ಕಂಡಳು! ಆದರೆ ಅದೇನದು ಮತ್ತೆ? ನೋಡುತಿದ್ದಂತೆಯೇ ಮುಖದ ಸೌಮ್ಯತೆ ಮರೆಯಾಯಿತು? ನಿದ್ದೆಗೆಟ್ಟಿತು, ಸಿಟ್ಟಿನಿಂದ ಧ್ವನಿ ಕರ್ಕಶವಾಯಿತು, ಕೂಗಿದನು ರಾಮ, ಶಬರಿ ಬೆಚ್ಚಿಬೀಳುವಂತೆ, 'ನಿಲ್ಲು, ನಿಲ್ಲು, ರಾಕ್ಷಸಾಧಮಾ, ನಿಲ್ಲು. ಹೇಳು ಎಲ್ಲಿಗೆ ಕದ್ದೊಯ್ದೆ ನನ್ನ ಸೀತೆಯನ್ನು? ನೀಚ!' ಹುಬ್ಬು ಗಂಟಿಕ್ಕಿ, ಉಸಿರುಕಟ್ಟಿ, ಔಡುಗಚ್ಚಿಕೊಂಡು ನಿದ್ದೆಯನ್ನೊದ್ದು, ದುಃಸ್ವಪ್ನವನ್ನು ಸೀಳಿ, ಅಬ್ಬರಿಸಿ ಎದ್ದುಕುಳಿತನು, ಬೆಚ್ಚಿನೋಡಿದನು ಸುತ್ತ. ಹೆದರಿ ನಿಂತಿದ್ದ ಶಬರಜ್ಜಿಯ ಕಂಡು ನಾಚಿ, ತಲೆತಗ್ಗಿಸಿ ನುಡಿದನು, 'ತಪ್ಪಿದೆನು ಅಜ್ಜಿ, ಕಂಡ ಕನಸನ್ನು ನನಸೆಂದೆಳಸಿ, ಸುಮ್ಮನೇ ನಿಮ್ಮನ್ನು ಅಂಜಿಸಿದೆನು.'

ಧೊಪ್ಪನೇ ಬಿದ್ದು ರಾಮನನ್ನು ಅಪ್ಪಿಕೊಂಡಳು ಮುದುಕಿ, 'ದಮ್ಮಯ್ಯ, ಸಾಕಿನ್ನು, ಮರೆಮಾಡಬೇಡಯ್ಯ, ಓ ನನ್ನ ಕಂದಯ್ಯ, ರಾಮಚಂದ್ರಯ್ಯ! ಏನಾಯಿತಯ್ಯ ನನ್ನ ಮಗಳಿಗೆ? ಎಲ್ಲಿದ್ದಾಳೆ ಸೀತೆ? ಏನು ಕೇಡಾಯ್ತು? ಅಯ್ಯಯ್ಯೋ ನನ್ನ ಈ ಹಾಳು ಕಣ್ಣುಗಳರಿಯದೇ ಹೋದವಲ್ಲ. ಅಯ್ಯೋ ನಾನಾಗಲೇ ನಿನ್ನ ತೆರೆದ ಜೋಳಿಗೆಯಲ್ಲಿ ಒಂದು ಸೀರೆಯನ್ನು ಕಂಡೆನಾದರೂ ಮರೆತೆನಲ್ಲಯ್ಯಾ? ಈ ಮುಪ್ಪು ಬೆಪ್ಪು!' ತಾಯಿಯ ಅಪ್ಪುಗೆಯ ತೊಟ್ಟಿಲಲ್ಲಿ ಶಿಶುವಾಗುತ್ತ ರಾಮನು ನುಡಿದನು, 'ನಾನೇ ಆ ನಿರ್ಭಾಗ್ಯ ರಾಮ! ಸೀತೆಯನ್ನು ಅಸುರನು ಕದ್ದೊಯ್ದನು. ಅವಳನ್ನು ಹುಡುಕಲೆಂದೇ ತೊಳಲುತ್ತ ಲಕ್ಷ್ಮಣನೊಡನೆ ಅಲೆಯುತ್ತಿದ್ದೇನೆ' ಶಬರಿಯ ತೋಳುಗಳಪ್ಪಿದ ತೆಕ್ಕೆಯೊಳಗೆ ದೈನ್ಯದಿಂದ, ದುಃಖಿತನಾಗಿ, ಬಿಕ್ಕಿ ಬಿಕ್ಕಿ ಅತ್ತನು ರಾಮ, ಯಾರಾಗಿದ್ದರೇನು ನಾವೆಲ್ಲ? ತಾಯಿಯ ಮಡಿಲಿನೊಳಗೆ ಬರಿಯ ಕಂದಮ್ಮಗಳೇ ತಾನೇ?

ತಾಳಲಾರದ ಶೋಕಭಾರದಿಂದ ಹಾಸಿಗೆಯಿಂದ ಏಳಲಾರದೇ ಶಬರಿಯ ಶುಶ್ರೂಷೆಯ ಅತಿಥಿಯಾದನು ರಾಮ. ಮನೋರೋಗಕ್ಕೆ ಪ್ರೇಮವೇ ದಿವ್ಯೌಷಧ! ಆರೈಕೆ ಮಾಡಿದಳು ತನ್ನಿಷ್ಟದೇವತಾ ಮೂರ್ತಿಗೆ, ಆ ತಪಸ್ವಿನಿ ಶಬರಿ. ಹಗಲಿರುಳೆನ್ನದೇ, ಎಚ್ಚರ–ನಿದ್ದೆಯೆನ್ನದೇ ನಿರಂತರವಾಗಿ ತನ್ನ ಆಯಸ್ಸನ್ನೇ ರಾಮಸೇವಾಸಾಧನೆಗೆ ಸವೆಸಿದಳು. ಹಾಸಿಗೆಯ ಬಳಿ ಕುಳಿತು, ರಾಮನ ಮೈದಡವುತ್ತ ವನವಾಸದ ಕತೆಯನ್ನೆಲ್ಲ ಕೇಳುವಳು; ಅಂತೆಯೇ ಮನೋವ್ಯಥೆಗಳನೆಲ್ಲ ತನ್ನ ಧೈರ್ಯದ ನುಡಿಗಳಿಂದ ಸಂತೈಸುವಳು; ಮತ್ತೆ, ಕೇಳುವವರಿಗೆ ಕುತೂಹಲವಾಗುವಂತೆ, ಖೇದವನ್ನಳಿಸುವಂತೆ ತನ್ನ ಬಾಳಿನ ಕತೆಯನ್ನೆಲ್ಲ ಹೇಳುವಳು.

ರಾಮನ ವಿಚಿತ್ರರೋಗ ಗುಣವಾಗಲಿಲ್ಲ! ದಿನೇ ದಿನೇ ಅವನ ತೇಜಸ್ಸು ಮಸುಳಿತು; ಭೀಮಕಾಯ ಕೃಶವಾಯ್ತು; ರಾವಣನ ಕುತಂತ್ರ ಫಲಿಸಿಬಿಟ್ಟಿತಲ್ಲಾ ಎಂಬ ನೋವಿನಲ್ಲಿ ಮನಸಿನೊಳಗಿನ ಕೆಚ್ಚು ಮುರುಟಿತು; ಮುಖವು ಬಾಡಿತು. ಒಂದು ದಿನ, ಕಾರಿರುಳಿನಲ್ಲಿ ಲಕ್ಷ್ಮಣನೊಬ್ಬನೇ ಹೊರಗೆ ಬಂದು ಕುಳಿತು ಬಿಕ್ಕಳಿಸಿ ಅಳುತ್ತ, ಕತ್ತೆತ್ತಿ ಸಪ್ತರ್ಷಿಮಂಡಲವನ್ನು ನೋಡುತ್ತಿರಲು ಬೆನ್ನಹಿಂದೆ ಯಾರೋ ಬಂದಂತಾಯ್ತು. ಕತ್ತಲಲ್ಲಿ ಕಣ್ಣು ಕಾಣದೇ ತಡವರಿಸಿ ಅವನ ಭುಜದ ಮೇಲೆ ಕೈಯಿಟ್ಟಳು ಶಬರಿ, 'ಇದೇನೋ ಕಂದಾ ಲಕ್ಷ್ಮಣಾ? ನೀನ್ಯಾಕೆ ಹೀಗೆ ಧೈರ್ಯಗೆಟ್ಟು ಕೊರಗುತಿಹೆ?' ಗದ್ಗದಿತನಾಗಿ ಸುಮಿತ್ರಾತ್ಮಜ ನುಡಿದ, 'ಅಜ್ಜೀ, ಅತ್ತಿಗೆಯ ಗತಿ ಹಾಗಾಯ್ತು.. ಈಗ ಅಣ್ಣ, ಅಣ್ಣನಿಗೆ...' ರೋಧಿಸುತ್ತಿದ್ದವನನ್ನು ತಡೆದು ಅವನ ಕಂಬನಿಯನ್ನೊರೆಸಿ, 'ಬಾ ಒಳಗೆ, ಬಿಡು ದುಃಖವನ್ನು ಸೌಮಿತ್ರಿ, ನಿನ್ನಣ್ಣನ ಉಸಿರಿಗೆ ನಾನೇ ಹೊಣೆಗಾರ್ತಿ. ನನ್ನ ಗುರುವಿನ ಕೃಪೆಯಿಂದ ರಾಮನ ರೋಗವನೆಲ್ಲ ಹೀರಿ ಬಿಸಾಡುವೆ, ಬಾ ನೋಡು!'

ಇಬ್ಬರೂ ಒಳಗೆ ನಡೆದರು. ತನ್ನ ಗುರುವನ್ನು ಧ್ಯಾನಿಸುತ್ತ, ಎಲುಬಿನ ಗೂಡಾಗಿ ಹಾಸಿನ ಮೇಲೆ ಮಲಗಿದ್ದ ಮೂರ್ತಿಯ ಬಳಿಬಂದಳು ಮುದುಕಿ. ತನ್ನ ಮೋಕ್ಷಕ್ಕೇ ತನ್ನ ದೇವತೆಯನ್ನು ಪ್ರಾರ್ಥಿಸುವಂತೆ, ಪ್ರದಕ್ಷಿಣೆ ಹಾಕಿ, ಮಂತ್ರಘೋಷಗೈದು, ಕೈಮುಗಿದು ರಾಮನ ಹಣೆಯನ್ನು ಮುಟ್ಟಿ ಸಾಷ್ಟಾಂಗವಾದಳು. ನಂತರ ಬೆರಗಾಗಿ ನೋಡುತ್ತಿದ್ದ ಲಕ್ಷ್ಮಣನೆಡೆಗೆ ತಿರುಗಿ ನುಡಿದಳು ನಗುತ್ತ, 'ವತ್ಸಾ, ಬದಿಗಿಡು ನಿನ್ನ ದುಃಖವನ್ನು. ರಾಮನಿನ್ನು ಸುಕ್ಷೇಮ!' ಮರುದಿನ ಬೆಳಗಾಗಲು, ಏನು ಹೇಳುವುದು?! ಸುದೃಢಕಾಯದಾರೋಗ್ಯದಿಂದ ರಾಮನೆದ್ದು ಕುಳಿತನು! ಉಜ್ವಲ ನೇತ್ರ, ಸುಪ್ರಸನ್ನ ಮುಖ, ಶೋಭಿಸುವಮಲ ಗಾತ್ರನ ಕಂಡು ಕೃತಜ್ಞತೆಯಿಂದ ಸೌಮಿತ್ರಿ ಶಬರಿಯ ಪದತಲಕ್ಕೆರಗಿದನು!

ಅದೇ ದಿನ ಶಬರಿ ಹಾಸಿಗೆ ಹಿಡಿದಳು. ತನ್ನ ಶುಶ್ರೂಷೆಯಿಂದ ನಿದ್ದೆಗೆಟ್ಟಳು, ದಣಿದಳು, ಬೆಂಡಾದಳು. ತನ್ನ ಅಳಲೆಲ್ಲವನ್ನೂ ಮರೆತು ರಾಮ ಅವಳನ್ನು ಉಪಚರಿಸಿದನು. 'ಮಗುವೇ ನನಗೋಸ್ಕರ ಮರುಗಬೇಡ. ಉಪಚಾರ ಬೇಕಾಗಿರುವುದು ಹಸಿರೆಲೆಗೆ, ಹಣ್ಣೆಲೆಗೇಕೆ?' ಮಾತಂಗಿ ನುಡಿದಳು, 'ಧನ್ಯೆ ನಾನು ರಾಮಚಂದ್ರ, ನೀನು ಪ್ರೀತಿಯಿಂದ ನನ್ನ ಪರಿಚರ್ಯೆ ಮಾಡುತ್ತಿರುವಾಗಲೇ ಶಾಂತಿಯಿಂದ ಪರಮಾತ್ಮನಲ್ಲಿ ಲೀನವಾದರೆ? ಇದಕ್ಕಿಂತ ಮಿಗಿಲಾದ ಪುಣ್ಯವೇನಿದೆ? ನೀನು ಮಾಡಬೇಕಾದ ಕೆಲಸ ಇನ್ನೂ ಬೆಟ್ಟದಷ್ಟಿದೆ, ಕಠಿಣವಾಗಿದೆ, ಸ್ವಪ್ನದಲ್ಲಿ ನಾನು ರಾವಣನ ಲಂಕೆಯ ಉದ್ಯಾನವನದಲ್ಲಿ ಸೀತೆ

ಸೊರಗುತ್ತಿದ್ದುದನ್ನು ಕಂಡೆ. ಅಂದು ಹೇಳಿದೆನಲ್ಲ, ನಿನ್ನಂತೆಯೇ ಮನೆಬಿಟ್ಟು, ಹೆಂಡತಿಯ ಕಳೆದುಕೊಂಡು ಕಾಡುಪಾಲಾದವನು ಸುಗ್ರೀವ. ನೋಡು, ಅಲ್ಲಿ ದಿಗ್ಮೇಖಲಾ ರೇಖೆಯಿಂದಾಚೆಗೆ ಭವ್ಯವಾಗಿ ನಿಂತಿರುವುದೇ ಋಷ್ಯಮೂಕ ಪರ್ವತ, ಅಲ್ಲೇ ಮತಂಗ ಮುನಿ ಕಾನನವಿದೆ, ಆ ಕಾಡಿನಂಚಿನಲ್ಲಿ ಪಂಪಾ ಸರೋವರವಿದೆ. ತುಂಗಭದ್ರೆಯ ಮೇಲೆ, ಬಳಿಯಲ್ಲೇ ಇದೆ ವಾನರ ರಾಜಧಾನಿ–ಕಿಷ್ಕಿಂಧೆ. ಈಗ ವಾಲಿ ಅದನ್ನು ಆಳುತಿದ್ದಾನೆ, ನೆಲೆಗೆಟ್ಟ ಸುಗ್ರೀವ ಗುಹಾವಾಸಿಯಾಗಿ ಮತಂಗ ಮುನಿಯ ಶಾಪರಕ್ಷೆಯಿರುವ ಋಷ್ಯಮೂಕದಲ್ಲಿ ಅಡಗಿಕೊಂಡಿದ್ದಾನೆ. ನೀನು ಹೋಗಿ ಅವನ ಸಖ್ಯವನ್ನು ಪಡೆ. ದುಃಖಿಗೆ ದುಃಖಿಯೇ ನೆರವಾಗಬೇಕು. ಗೆಲುವು ದೈವೇಚ್ಛೆ. ನಿನ್ನಿಚ್ಛೆಯೂ ನೆರವೇರಲಿ!' ನುಡಿ–ನುಡಿಯುತ್ತಲೇ ಅತೀ ಹರ್ಷಮುಖಿಯಾಗಿ ರಾಮನನ್ನೂ ಸೌಮಿತ್ರಿಯನ್ನೂ ಆನಂದಬಾಷ್ಪ ತುಂಬಿದ ಕಂಗಳಿಂದ ನೋಡುತ್ತ ಕಣ್ಣು ಮುಚ್ಚಿದಳು, ಆ ಅಮರ ಸನ್ಯಾಸ್ಯೆ, ದೇವ ಸೀತಾನಾಥನ ದಿವ್ಯಾಶ್ರು ತೀರ್ಥ ಸಂಸ್ನಾತೆ, ಸಂಪೂತೆ, ಶಿವಕಳೇಬರೆ, ಧನ್ಯೆ!

**ಇದು ರಾಷ್ಟ್ರಕವಿ, ಕವಿವರ್ಯ ಕುವೆಂಪು ವಿರಚಿತ ಶ್ರೀ ರಾಮಾಯಣ ದರ್ಶನದ ಶಬರಿಗಾದನು ಅತಿಥಿ ದಾಶರಥಿ (ಕಿಷ್ಕಿಂಧಾ ಸಂಪುಟ । ಸಂಚಿಕೆ ೩) ಭಾಗದ ತೆಳು(ತಿಳಿ)ಗನ್ನಡ ರೂಪ. ಪ್ರತೀಸಲ ಓದುವಾಗಲೂ ಅಳಿಸಿ, ಉಲ್ಲಸಿತರನ್ನಾಗಿ ಮಾಡಿ, ಎದೆ ತುಂಬಿಬರುವಂತೆ ಮಾಡುವ ಮಹಾಛಂದಸ್ಸಿನ ಪದ್ಯದ ಸಾಲುಗಳ ಗದ್ಯ ರೂಪ. ಆಚಾರ್ಯರ ಪ್ರತಿ ಪದವನ್ನೂ ಹಾಗೇ ಉಳಿಸಿಕೊಂಡು (ಅರ್ಥವಾಗದ್ದನ್ನು ನುಂಗಿ), ನಾನು ಅನುಭವಿಸಿದ ಆನಂದೋದ್ವೇಗವನ್ನೂ, ಉಲ್ಲಾಸವನ್ನೂ ನೀವೆಲ್ಲರೂ ಅನುಭವಿಸಬೇಕೆಂದು ಅನುವಾದಿಸಿದ್ದೇನೆ. ಮೊದಮೊದಲು ಸ್ವಲ್ಪವನ್ನೇ ಅನುವಾದಿಸಿ ಕುವೆಂಪುರವರ ವರ್ಣನಾತೀತ ಪರಿಸರ ವರ್ಣನೆ, ಉಪಮೆಗಳ ಬಳಕೆ, ಶ್ರೀಮಂತ ಭಾಷೆಯ ಬಗ್ಗೆ (ನನಗರ್ಥವಾದಷ್ಟನ್ನು) ನನ್ನದೇ ಧಾಟಿಯಲ್ಲಿ ಕೊರೆಯೋಣವೆಂದುಕೊಂಡಿದ್ದೆ! ಆದರೆ ಅನುವಾದ ಮಾಡುತ್ತಾ ಮಾಡುತ್ತಾ ಶಬರಿ ನನ್ನನ್ನು ಬಿಡಲೇ ಇಲ್ಲ! ಹೃದಯ–ಸ್ಪರ್ಶಿ ಕೊನೆಯ ವಾಕ್ಯವನ್ನಾದರೂ ಹೇಗೆ ನಿಮ್ಮಿಂದ ಮರೆಮಾಚುವುದು ಎಂದು ಸಂಕಟಪಟ್ಟು ಪೂರ್ತಿಯಾಗಿ ಅನುವಾದ ಮಾಡಿಬಿಟ್ಟೆ! ತಪ್ಪುಗಳಿದ್ದಲ್ಲಿ ಹೇಳಬೇಕು (ಮತ್ತು ಹಾಗೆಯೇ ನನ್ನನ್ನು ದಂಡಿಸಬೇಕು)!**